ಪಿ.ಡಬ್ಲ್ಯೂ .1 ಅಸಲು ದಾವಾ ಸಂಖ್ಯೆ . 127/2013

**ದಿನಾಂಕಃ-16.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- 7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಸಿ.ಆರ್.ಬಿ ರವರಿಂದ**

ನನ್ನ ತಂದೆ ಕದರಯ್ಯ ಆಗಿದ್ದಾರೆ. ನನ್ನ ಅಜ್ಜನ ಹೆಸರು ಸತ್ತಿಗಪ್ಪ. ನನ್ನ ತಾತನಿಗೆ ರಾಮಯ್ಯ ಮತ್ತು ನರಸೀಯಪ್ಪ ಎಂಬ ಇಬ್ಬರು ಸಹೋದರರು ಎಂದರೆ ಸರಿ.ನನ್ನ ತಾತ ಸತ್ತಿಗಪ್ಪ ರವರಿಗೆ ಕದರಪ್ಪ, ನರಸಪ್ಪ ಮತ್ತು ದೊಡ್ಡನರಸಮ್ಮ ಎಂಬ ಮೂವರು ಮಕ್ಕಳು ಇದ್ದಾರೆ. ನನ್ನ ತಾತನ ಸಹೋದರ ನರಸೀಯಪ್ಪ ರವರಿಗೆ ಕದರಿ ನರಸಿಂಹಯ್ಯ ಎಂಬ ಮಗ ಇದ್ದನು ಎಂದರೆ ಸರಿ. ರಾಮಯ್ಯ ರವರಿಗೆ ಚಿಕ್ಕಣ್ಣ ಎಂಬ ಮಗ ಇದ್ದಾರೆ ಎಂದರೆ ಸರಿ.

ದಾವಾ ಸರ್ವೆ ನಂ.16/2 ನನ್ನ ತಾತನ ಸಹೋದರ ನರಸೀಯಪ್ಪ ರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/2 ರಲ್ಲಿ ನನ್ನ ತಾತ ಮತ್ತು ಆತನ ಸಹೋದರರು ಒಟ್ಟಿಗೆ ಅನುಭವದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/2 ರಲ್ಲಿ ಒಟ್ಟು 4 ಎಕರೆ 29 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆದರೆ ನನ್ನ ತಂದೆ ಹೆಸರಿನಲ್ಲಿದ್ದ ಜಮೀನನ್ನು ಕೊಟ್ಟಿದ್ದೇನೆ ಎಂದಿದ್ದಾರೆ. ನನ್ನ ತಂದೆ ಕದರಪ್ಪ ಮತ್ತು ಆತನ ತಮ್ಮ ನರಸಪ್ಪ ಸೇರಿಕೊಂಡು ದಿಃ 19.10.1964 ರಂದು 1 ಎಕರೆ ಜಮೀನನ್ನು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಜಮೀನಿನ ಸ್ವಾಧೀನವನ್ನು 7 ನೇ ಪ್ರತಿವಾದಿ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಖರೀದಿ ಮಾಡಿದ ದಿನದಿಂದ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಅವರ ಮರಣದ ನಂತರ ಅವರ ಮಕ್ಕಳು ಅಂದರೆ 7 ನೇ ಪ್ರತಿವಾದಿ ಮತ್ತು ಆತನ ಸಹೋದರರು ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ಮಾರಾಟ ಮಾಡಿಲ್ಲ ಎಂದಿದ್ದಾರೆ. ನಂತರ ನನ್ನ ತಂದೆ ಮತ್ತು ನರಸಪ್ಪ ಸೇರಿಕೊಂಡು ದಿಃ 15.03.1965 ರಲ್ಲಿ ಸರ್ವೆ ನಂ.16/2 ರಲ್ಲಿ 20 ಗುಂಟೆಯನ್ನು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ 7 ನೇ ಪ್ರತಿವಾದಿಯ ತಂದೆ

ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಕೈ ಮುರಿದುಹೋಗಿದ್ದರಿಂದ ವ್ಯವಸಾಯ ಮಾಡಲು ಆಗದೇ ಬಂದ ಫಸಲಲ್ಲಿ ನಮಗೂ ಅರ್ಧ ಕೊಡಿ ಎಂದು ಹೇಳಿ ಅವರಿಗೆ ಕೊಟ್ಟಿದ್ದರು ಎಂದಿದ್ದಾರೆ. 7 ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತಿನಲ್ಲಿ ಕ್ರಯದ ಆಧಾರದ ಮೇರೆಗೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಯ ತಂದೆಗೆ ವ್ಯವಸಾಯ ಮಾಡಲು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕತಾತ ರಾಮಯ್ಯ ಮತ್ತು ಆತನ ಮಗ ಚಿಕ್ಕಣ್ಣ ಸೇರಿ ಸರ್ವೆ ನಂ.16/2 ರಲ್ಲಿ 20 ಗುಂಟೆ ಜಮೀನನ್ನು 7 ನೇ ಪ್ರತಿವಾದಿಯ ತಂದೆಗೆ ದಿಃ 05.03.1966 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಪ್ರಕಾರ ಸದರಿ 20 ಗುಂಟೆ ಜಮೀನು 7 ನೇ ಪ್ರತಿವಾದಿಯ ತಂದೆಯ ಸ್ವಾಧೀನಕ್ಕೆ ಬಂದಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ನನ್ನ ತಂದೆ ಹೆಸರಿನಲ್ಲಿದ್ದ ಜಮೀನು ಯಾವುದು ಮಾರಾಟ ಆಗಿಲ್ಲ ಎಂದಿದ್ದಾರೆ. ನರಸೀಯಪ್ಪನ ಮಗ ಕದರಿನರಸಿಂಹಯ್ಯ ಸರ್ವೆ ನಂ.16/2 ರಲ್ಲಿ 15 ಗುಂಟೆ ಜಮೀನನ್ನು ದಿಃ 19.11.1967 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಸಹ 7 ನೇ ಪ್ರತಿವಾದಿಯ ತಂದೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನರಸೀಯಪ್ಪನ ಮಗ ಕದರಪ್ಪ ಸರ್ವೆ ನಂ.16/2 ರಲ್ಲಿ 30 ಗುಂಟೆ ಜಮೀನನ್ನು ದಿಃ 20.02.1963 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಕರಿಯಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಕರಿಯಪ್ಪ ಸದರಿ 30 ಗುಂಟೆ ಜಮೀನನ್ನು ದಿಃ 01.06.1970 ರಂದು 7 ನೇ ಪ್ರತಿವಾದಿಯ ತಂದಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ 7 ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತಿನಲ್ಲಿ ಸಹ ಸ್ವಾಧೀನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

7 ನೇ ಪ್ರತಿವಾದಿಯ ತಂದೆ ಸರ್ವೆ ನಂ.16/2 ರಲ್ಲಿ ಒಟ್ಟು 3 ಎಕರೆ 5 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಕೊಟ್ಟಿಲ್ಲ ಬೇರೆಯವರು ಕೊಟ್ಟಿರಬಹುದು ಎಂದಿದ್ದಾರೆ. ಸದರಿ 3 ಎಕರೆ 5 ಗುಂಟೆ ಜಮೀನಿನ ಪೂರ್ವಕ್ಕೆ ಸರ್ವೆ ನಂ.16/2 ರ ಉಳಿಕೆ ಜಮೀನು ಎಂದರೆ ಸಾಕ್ಷಿಯು ಯಾರುದು ಎಂದು ಹೇಳಿದ್ದಾರೆ. ಪಶ್ಚಿಮಕ್ಕೆ ಗೋಮಾಳ ಜಮೀನು ಆಗಿದ್ದು ಈಗ 7 ನೇ ಪ್ರತಿವಾದಿ ಇದ್ದಾರೆ ಎಂದರೆ ಸಾಕ್ಷಿ ಅದು ನನ್ನ ತಂದೆಗೆ ಸೇರಿದ್ದು ಎಂದಿದ್ದಾರೆ. ಉತ್ತರಕ್ಕೆ ಹುಚ್ಚಮ್ಮ ಮತ್ತು ಕೆರೆ ಅಂಗಳ ಇದೆ ಎಂದರೆ ಸಾಕ್ಷಿ ಅದು ನನ್ನ ತಂದೆಗೆ ಸೇರಿದ

ಜಮೀನು ಎಂದಿದ್ದಾರೆ. ದಕ್ಷಿಣಕ್ಕೆ ಕರಿಯಪ್ಪನವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯ ತಂದೆ ಮೇಲೆ ತಿಳಿಸಿದ ಚೆಕ್ಕುಬಂದಿಯ ಒಟ್ಟು ಸ್ವತ್ತಿನಲ್ಲಿ ಇದ್ದರು ಎಂದರೆ ಸಾಕ್ಷಿ ಒಟ್ಟು ಸ್ವತ್ತಿನಲ್ಲಿ ಇರಬಹುದು ಆದರೆ ನನ್ನ ತಂದೆಯ ಜಮೀನಿನಲ್ಲಿ ಇಲ್ಲ ಎಂದಿದ್ದಾರೆ. ಕ್ರಯಪತ್ರದ ಆಧಾರದ ಮೇರೆಗೆ 3 ಎಕರೆ 5 ಗುಂಟೆ ಜಮೀನು ಶಿವಣ್ಣ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ಬೋಗಸ್ ಮಾಡಿದ್ದಾರೆ ಎಂದಿದ್ದಾರೆ. ಕ್ರಯಪತ್ರದ ಆಧಾರದ ಮೇರೆಗೆ ಶಿವಣ್ಣರವರು ಪೋಡಿ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ ಎಂದಿದ್ದಾರೆ. ಶಿವಣ್ಣರವರ ಹೆಸರಿಗೆ ಸರ್ವೆ ನಂ.16/2 ಎ ಎಂದು ಪೋಡಿ ಆಗಿದೆ ಎಂದರೆ ಸಾಕ್ಷಿಯು ಮೊದಲಿಗೆ ಗೊತ್ತಿರಲಿಲ್ಲ ತಿಳಿದ ನಂತರ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದಿದ್ದಾರೆ. ಸರ್ವೆ ನಂ.16/2 ಎ ಶಿವಣ್ಣರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ಆ ಕಾರಣಕ್ಕೆ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದಿದ್ದಾರೆ. 7 ನೇ ಪ್ರತಿವಾದಿಯ ತಂದೆ ಶಿವಣ್ಣ ಖರೀದಿ ಮಾಡಿರುವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ದಾವಾ ಐಟಂ ನಂ.2 ನ್ನು ಸೇರಿಸಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆಯ ಜಮೀನು ಆಗಿದೆ ಎಂದಿದ್ದಾರೆ. 7 ನೇ ಪ್ರತಿವಾದಿಯ ತಂದೆ ಶಿವಣ್ಣ ದಿಃ 17.02.1987 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

7 ನೇ ಪ್ರತಿವಾದಿಯ ತಂದೆ ಖರೀದಿ ಮಾಡಿದ ಸ್ವತ್ತು ಅವರ ಜೀವಿತ ಕಾಲದಲ್ಲಿಯೇ ಅವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಬೋಗಸ್ ಆಗಿದೆ ಎಂದಿದ್ದಾರೆ. 7 ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಸರ್ವೆ ನಂ.16/2 ಎ ರಲ್ಲಿ 2 ಎಕರೆ 39 ಗುಂಟೆ ಜಮೀನಿಗೆ 7 ನೇ ಪ್ರತಿವಾದಿ ಮತ್ತು ಆತನ ಸಹೋದರರು ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಗುಬ್ಬಿ.**